# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 373 |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 19.02.2024 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳು ಸ್ವಚ್ಛತೆಯ ಕಡೆ ಗಮನಹರಿಸದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ: | ಬಂದಿದೆ. |
| (ಆ) | ಅವಶ್ಯವಿರುವ ಸ್ವಚ್ಛತಾ ಸಿಬ್ಬಂದಿ (Non Clinical Posts) ಗಳನ್ನು ಹೊರಗುತ್ತಿಗೆ ಅಥವಾ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಕೈಗೊಂಡಿರುವ ಕ್ರಮಗಳೇನು: | 2020-21ನೇ ಸಾಲಿನಲ್ಲಿ ರೋಗಿಗಳ ಹಿತದೃಷ್ಠಿಯಿಂದ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಖಾಲಿ ಇರುವ ಗ್ರೂಪ್.ಡಿ ಹುದ್ದೆಗಳಿಗೆ ಎದುರಾಗಿ ಶೇ 45% ರಷ್ಟು ಗ್ರೂಪ್.ಡಿ ನೌಕರರನ್ನು ಮತ್ತು ಆಸ್ಪತ್ರೆಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವ ಹಿತದೃಷ್ಠಿಯಿಂದ ಶೇ 30% ರಷ್ಟು ನಾನ್ ಕ್ಲಿನಿಕಲ್ ಹುದ್ದೆಗಳಲ್ಲಿ ಒಟ್ಟಾರೆಯಾಗಿ ಶೇ.75% ರಷ್ಟಕ್ಕೆ ಮೀರದಂತೆ ಟೆಂಡರ್ ನಿಯಮಗಳನ್ನು ಪಾಲಿಸಿಕೊಂಡು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಆಕುಕ/01/ಸಿಜಿಎಂ/2019, ದಿನಾಂಕ: 24.06.2019ರಲ್ಲಿ ಅನುಮತಿಯನ್ನು ನೀಡಲಾಗಿರುತ್ತದೆ.<br>ಅದರಂತೆ ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಟೆಂಡರ್ ಕರೆದು ಅವಶ್ಯಕತೆ ಇರುವ ನಾನ್ ಕ್ಲಿನಿಕಲ್ ಸಿಬ್ಬಂದಿಗಳನ್ನು ಪಡೆದು ರಾಜ್ಯದ ಆಸ್ಪತ್ರೆಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಲಾಗುತ್ತಿದೆ. |
| (ಇ) | ಸ್ವಚ್ಛತೆಯ ಮೂಲಕ ಸೋಂಕು ಹರಡುವಿಕೆ ತಡೆಗಟ್ಟಲು ಕೈಗೊಳ್ಳಲಾದ ಕ್ರಮಗಳೇನು? | ಸ್ವಚ್ಛತೆಯ ಮೂಲಕ ಸೋಂಕು ಹರಡುವಿಕೆ ತಡೆಗಟ್ಟಲು ಕೈಗೊಳ್ಳಲಾದ ಕ್ರಮಗಳು:<br><br>1. ಸ್ವಚ್ಛತೆಯನ್ನು ಕಾಪಾಡಲು ಕಾಯಕಲ್ಪ ಮತ್ತು ಎನ್ ಕ್ಯೂ ಎ ಎಸ್/ ಲಕ್ಷ್ಯ/ ಮುಸ್ಕಾನ್ ಮುಂತಾದ ಗುಣಮಟ್ಟ ಖಾತ್ರಿ ಕಾರ್ಯ ಯೋಜನೆಗಳನ್ನು ಎಲ್ಲಾ ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. |

ಈ ಯೋಜನೆಗಳಡಿಯಲ್ಲಿ ಆಸ್ಪತ್ರೆ ಮತ್ತು ಸುತ್ತಮುತ್ತಲಿನ ಪರಿಸರದ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಲು ಉತ್ತೇಜಿಸಲಾಗಿರುತ್ತದೆ.

2. ಆಸ್ಪತ್ರೆಗಳಲ್ಲಿ Hospital Infection Control & Cleanliness Committee (HICCC)ಗಳನ್ನು ರಚಿಸಿ ಆಸ್ಪತ್ರೆಗಳ ಮಟ್ಟದಲ್ಲಿ ಸೇವಾ ಪೂರೈಕೆದಾರರು ತಮ್ಮ ತಮ್ಮ ಅಸ್ಪತ್ರೆಯ ಸ್ವಚ್ಛತೆಯ ಬಗ್ಗೆ ಇರುವ ನ್ಯೂನತೆಗಳನ್ನು ಚರ್ಚಿಸಿ ಸರಿದೂಗಿಸಲು ಕ್ರಮವನ್ನು ಕೈಗೊಳ್ಳಲಾಗಿದೆ.

3. ಆಸ್ಪತ್ರೆಗಳಲ್ಲಿ ಸೋಂಕುಗಳನ್ನು ತಡೆಗಟ್ಟಲು ತೀವ್ರ ನಿಗಾ ಘಟಕಗಳಾದ ಹೆರಿಗೆ ಕೊಠಡಿ, ಶಸ್ತ್ರ ಚಿಕಿತ್ಸಾ ಕೊಠಡಿಗಳಲ್ಲಿ ತೀವ್ರ ನಿಗಾ ಘಟಕಗಳಲ್ಲಿ Zoning ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಇದರಿಂದ ಆಯಕಟ್ಟಿನ ಸ್ಥಳಗಳಲ್ಲಿ ಜನ ಸಾಂದ್ರತೆಯನ್ನು ಕಡಿಮೆಗೊಳಿಸಿ ಸ್ವಚ್ಛತೆಯಿಂದ ಸೋಂಕು ಹರಡುವಿಕೆಯನ್ನು ತಡೆಗಟ್ಟಲಾಗುತ್ತದೆ. ಅನಗತ್ಯ ಸಂದರ್ಶನಗಳನ್ನು ನಿರ್ಬಂಧಿಸಲಾಗಿರುತ್ತದೆ.

4. ಸಂದರ್ಶನದ ವೇಳೆಗಳನ್ನು ಕಟ್ಟುನಿಟ್ಟಾಗಿ ಸಡಿಲಿಸದೆ ಅನುಸರಿಸಲಾಗುತ್ತಿದೆ.

5. ಆಸ್ಪತ್ರೆಯ ಸಿಬ್ಬಂದಿಗಳ ಶುಚಿತ್ವವನ್ನು ಕಾಪಾಡಲು ಆಗಿಂದಾಗ್ಗೆ ಕೈಗಳ ಸ್ವಚ್ಛತೆಯನ್ನು ಕಾಪಾಡುವುದರಿಂದ ಸೋಂಕು ಹರಡುವಿಕೆಯನ್ನು ನಿಯಂತ್ರಿಸಲಾಗುತ್ತಿದೆ.

6. ರೋಗಿಗಳ ಉಪಚಾರಕ್ಕಾಗಿ ಬಳಸುವ ಉಪಕರಣಗಳು ಮತ್ತು ಪರಿಕರಗಳ ಸ್ವಚ್ಛತೆ ಮತ್ತು ಸ್ಟೈರಲೈಜೇಶನ್‌ಗೊಳಿಸಿ ಬಳಸಲಾಗುತ್ತಿದೆ. ಇದರಿಂದ ಸೋಂಕುಗಳನ್ನು ತಡೆಗಟ್ಟಲಾಗುತ್ತಿದೆ.

7. ರೋಗಿಗಳನ್ನು ಉಪಚರಿಸುವ ಮೊದಲು ಮತ್ತು ಆನಂತರ ಸಿಬ್ಬಂದಿಯ ಕೈಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ.

8. ಶಸ್ತ್ರ ಚಿಕಿತ್ಸೆ (ಪ್ರಮುಖ ಮತ್ತು ಚಿಕ್ಕ) ಕೈಗೊಳ್ಳುವ ಮುನ್ನ ರಕ್ಷಣಾ ಕವಚವನ್ನು ಧರಿಸುವ ಮೂಲಕ ಸೋಂಕು ಹರಡುವಿಕೆಯನ್ನು ತಡೆಗಟ್ಟಲಾಗುತ್ತಿದೆ.

9. ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸುವ ಶಸ್ತ್ರ, ಚಿಕಿತ್ಸಾ ಕಟ್ಟಡಗಳನ್ನು ಆಗಿಂದಾಗೆ, ಶುಚಿಗೊಳಿಸಲಾಗುತ್ತಿದೆ.

10. ಶುಚಿತ್ವದಿಂದ ಸೋಂಕು ಕಡಿತ (disinfection) ಗೊಳಿಸಲಾಗುತ್ತಿದೆ.

11. ಆಸ್ಪತ್ರೆಗಳಲ್ಲಿ ಹೊರಗಿನ ಚಪ್ಪಲಿಗಳು ಮತ್ತು ಶೂಗಳನ್ನು Procedures ಗಳನ್ನು ನೆರವೇರಿಸುವ ಕೊಠಡಿಗಳಿಗೆ ನಿರ್ಬಂಧಿಸಿ ಸೋಂಕುಗಳನ್ನು ತಡೆಗಟ್ಟಲಾಗುತ್ತಿದೆ.

12. ಆಸ್ಪತ್ರೆಗಳಲ್ಲಿನ ಸ್ವಚ್ಛತೆಯನ್ನು ಉತ್ತೇಜಿಸಲು ಮತ್ತು ಸದಾ ಕಾಪಾಡಲು ಆಸ್ಪತ್ರೆಗಳಿಗೆ ಕಾಯಕಲ್ಪ ಯೋಜನೆಯಡಿಯಲ್ಲಿ ಪ್ರತಿವರ್ಷವು ಪ್ರಶಸ್ತಿಗಳನ್ನು ವಿತರಿಸಲಾಗುತ್ತಿದೆ. ಪ್ರಶಸ್ತಿಯ ಭಾಗವಾಗಿ ಬಹುಮಾನಗಳನ್ನು ಮತ್ತು ಪ್ರಶಸ್ತಿ ಪತ್ರಗಳನ್ನು ಶೇ 70% ರಷ್ಟು ಅಂಕ ಪಡೆದ ಎಲ್ಲಾ ಆಸ್ಪತ್ರೆಗಳಿಗೆ ನೀಡಲಾಗುತ್ತಿದೆ.

- ಕಾಯಕಲ್ಪ ಚಟುವಟಿಕೆಯಲ್ಲಿ 2022-23ರಲ್ಲಿ 1641 ಆರೋಗ್ಯ ಸಂಸ್ಥೆಗಳು ಪ್ರಶಸ್ತಿಗೆ ಅರ್ಹವಾಗಿರುತ್ತವೆ. (ಜಿಲ್ಲಾ ಆಸ್ಪತ್ರೆ-33, ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು-188, ನಗರ ಸಮುದಾಯ ಆರೋಗ್ಯ ಕೇಂದ್ರಗಳು-08, ಪ್ರಾಥಮಿಕ ಆರೋಗ್ಯ ಕೇಂದ್ರಗಳು-760, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು 140 ಹಾಗೂ ಆಯುಷ್ಮಾನ್ ಆರೋಗ್ಯ ಮಂದಿರಗಳು-512).

- ರಾಷ್ಟ್ರೀಯ ಗುಣಮಟ್ಟ ಖಾತ್ರಿ ಮಾನದಂಡಗಳು ಚಟುವಟಿಕೆಯಲ್ಲಿ ಇದುವರೆಗೂ 591 ಆರೋಗ್ಯ ಸಂಸ್ಥೆಗಳು ರಾಜ್ಯ ಮತ್ತು ರಾಷ್ಟ್ರೀಯ ಪ್ರಮಾಣೀಕೃತವಾಗಿರುತ್ತವೆ. (ಜಿಲ್ಲಾ ಆಸ್ಪತ್ರೆ-18, ತಾಲ್ಲೂಕು ಆಸ್ಪತ್ರೆ-53, ಸಮುದಾಯ ಆರೋಗ್ಯ ಕೇಂದ್ರಗಳು-36, ನಗರ ಸಮುದಾಯ ಆರೋಗ್ಯ ಕೇಂದ್ರಗಳು-07, ಪ್ರಾಥಮಿಕ ಆರೋಗ್ಯ ಕೇಂದ್ರಗಳು- 142, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು-107 ಹಾಗೂ ಆಯುಷ್ಮಾನ್ ಆರೋಗ್ಯ ಮಂದಿರಗಳು-200).

**ಸಂಖ್ಯೆ: ಆಕುಕ 34 ಸಮನ್ವಯ 2024**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು